# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **767/2023**

ಸಿ.ಡಬ್ಲ್ಯೂ- 13
ಪಿ.ಡಬ್ಲ್ಯೂ- 5

**ದಿನಾಂಕಃ 04-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಓಂಪ್ರಕಾಶ ಆಡಿನ |
| ತಂದೆಯ/ಗಂಡನ ಹೆಸರು | : | ರಾಮಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಹಿರಿಯ ಮೋಟಾರ ವಾಹನ ನಿರೀಕ್ಷಕರು RTO ಬೆಳಗಾವಿ |
| ವಾಸ ಸ್ಥಳ | : | ಬೆಳಗಾವಿ |
| ತಾಲೂಕು | : | ಬೆಳಗಾವಿ |

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-VC ಮೂಲಕ</u>**

ನಾನು ದಿಃ 01-03-2018 ರಿಂದ 31-07-2020 ರವರೆಗೆ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿ ಗೋಕಾಕ ಇಲ್ಲಿ ನಿಯೋಜನೆ ಮೇರೆಗೆ ಮೋಟಾರ ವಾಹನ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 31-05-2018 ರಂದು ಚಾಸಾ 17 ರವರು ಪ್ರಸ್ತುತ ಪ್ರಕರಣದಲ್ಲಿ ಅಪಘಾತದಲ್ಲಿ ಭಾಗಿಯಾದ ದ್ವಿಚಕ್ರ ವಾಹನ ನಂ.KA 49 W 0558 ನ್ನು IMV ತಪಾಸಣೆಗೆ ಒಳಪಡಿಸುವಂತೆ ನಿವೇದನೆ ಸಲ್ಲಿಸಿರುತ್ತಾರೆ. ಅದೇ ದಿನ ಸಂಜೆ 4-00 ಗಂಟೆಗೆ ಘಟಪ್ರಭ ಪೊಲಿಸ ಠಾಣಾ ಆವರಣಕ್ಕೆ ಭೇಟಿ ನೀಡಿ ಸದರಿ ದ್ವಿಚಕ್ರ ವಾಹನವನ್ನು IMV ತಪಾಸಣೆಗೆ ಒಳಪಡಿಸಿರುತ್ತೇನೆ. ವಾಹನ ತಪಾಸಣೆಯ ಸಮಯದಲ್ಲಿ ಮುಂದಿನ head light, ಎರಡು indicator, ಮುಂದಿನ number plate ಜಕಂಗೊಂಡಿದ್ದು, ಫೋರ್ಕ ಬೆಂಡ ಆಗಿರುತ್ತದೆ. ಸದರಿ ದ್ವಿಚಕ್ರ ವಾಹನವನ್ನು ಚಲಾಯಿಸಿ ನೋಡಲಾಗಿ ವಾಹನದ ಅಡೆತಡೆಗಳು ಸುಸ್ಥಿತಿಯಲ್ಲಿದ್ದು ಯಾವುದೇ ಯಾಂತ್ರಿಕ ದೋಷ ಕಂಡುಬಂದಿರುವುದಿಲ್ಲ. ದಿಃ 02-08-2018 ರಂದು ಚಾಸಾ ್17 ರವರಿಗೆ IMV ವರದಿಯನ್ನು ಸಲ್ಲಿಸಿರುತ್ತೇನೆ. IMV ವರದಿಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನನ್ನ ಪ್ರಕಾರ ಪ್ರಸ್ತುತ ಪ್ರಕರಣದಲ್ಲಿ ಹೇಳಿರುವ ಅಪಘಾತವು ವಾಹನದ ಯಾಂತ್ರಿಕ ದೋಷದಿಂದ ಉಂಟಾಗಿರುವುದಿಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ Sri.MIB ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿಃ 31-05-2018 ರಂದು ಚಾಸಾ 17 ರವರಿಂದ ನಿವೇದನೆ ಪಡೆದುಕೊಂಡಿರುವುದಿಲ್ಲ, ಠಾಣಾ ಆವರಣಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ದ್ವಿಚಕ್ರ ವಾಹನವನ್ನು

ತಪಾಸಣೆಗೆ ಒಳಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾಹನದ ಭಾವಚಿತ್ರದ ಆಧಾರದ ಮೇಲೆ ನಿಪಿ-9 ನ್ನು ನನ್ನ ಕಚೇರಿಯಲ್ಲಿ ತಯಾರಿಸಿ ಚಾಸಾ 17 ರವರ ತನಿಖೆಗೆ ಸಹಾಯ ಮಾಡಲು ಸುಳ್ಳಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
**ಮೂಡಲಗಿ.**